ಮಾಡಿಲ್ಲ. ಇದರ ಬಗ್ಗೆ 1996-97ನೇ ಸಾಲಿನಲ್ಲಿ ಪರಿಗಣಿಸಲಾಗುವುದು.

ಆ) ಇಲ್ಲ.

ಇ) ಇಲ್ಲ.

ವಿಷಯ:- ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ರಸ್ತೆ ಮೇಲೆ ನಿರ್ಮಿಸುತ್ತಿರುವ ಸೇತುವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 640 (546)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6 ಮತ್ತು 11ರಲ್ಲಿ ಎರಡು ಸೇತುವೆಗಳು ಯಾವಾಗ ಮಂಜೂರಾಗಿವೆ ವರ್ಷ ಹಾಗೂ ಅಂದಾಜು ವೆಚ್ಚದ ವಿವರ ನೀಡುವುದು.

ಆ) ಕಾಮಗಾರಿ ಕುಂಠಿತಗೊಂಡು ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6ರಲ್ಲಿನ ಸೇತುವೆ 1993-94ರಲ್ಲಿ 4 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ. ಕಿ.ಮೀ.11ರಲ್ಲಿನ ಸೇತುವೆ 1991-92ರಲ್ಲಿ 4.88 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ.

ಆ) ಕಿ.ಮೀ. 6ರಲ್ಲಿನ ಸೇತುವೆಯ ಕಾಮಗಾರಿ ಬಗ್ಗೆ ಭೂಮಾಲೀಕರಿಂದ ತಕರಾರು ಇದ್ದು, ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ, ನಿರ್ಣಯ ಆಗುವವರೆಗೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಕಿ.ಮೀ.10ರಲ್ಲಿನ ಸೇತುವೆ ನಿರ್ಮಾಣದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಸದರಿ ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸದೆ ಇದ್ದುದರಿಂದ ಗುತ್ತಿಗೆಯನ್ನು ರದ್ದುಗೊಳಿಸಿ ಹೊಸ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ಇನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ:- ರಾಜ್ಯದಲ್ಲಿ ಮದ್ಯಪಾನ ನಿಷೇಧ ಜಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 641 (1437)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಬಕಾರಿ ಸಚಿವರು ಈ